So; once the Bill is passed and the Speaker certifies it, it is the bounden duty of the Government to send it to the Governor ; it cannot be sent to anybody else, and there is no question of the Legislature having any jurisdiction over the matter. The functions of the Legislature comes to an end when it has certified, and after certification by the Speaker the rest of the action has to be taken by the Executive. Therefore, it does not come under the purview of the breach of privilege of the House.

Secondly, I would like to know when the file was sent to the Chief Justice. This is very important. From the records I could say that the Bill has been passed and the Speaker has certified it in September 1978. It is my information that the Law Department opined that the file should not be sent to the Chief Justice, but the Minister for Law over-ruled the departmental opinion and sent the file to the Chief Justice. I would also like to know when it was received back from the Chief Justice ? If it was received in the month of April or May, whether it has been sent to the Governor, I want to know. Who has come in the way of the Bill ? If it was received in the month of May why the Government did not send it to the Governor so far ? My information is that it has not been sent to the Governor. I would like to know whether it is sent to the Governor. The person responsible, whoever it may be, is entirely responsible for blocking the Bill. I want to know when it was sent to the Chief Justice when it was received back and when it was sent to the Governor. This is very important. According to my information, after the new Chief Justice took charge, 30 appointments have been made out of whom 19 belong to SC/STs.

SRI C. M. ARUMUGHAM.—Sir, I rise to a Point of Order. The Hon. the Leader of the Opposition is discussing the merits of the issue. Shall I say what other things he has done ?

SRI S. R. BOMMAI.—I will not refer to it.

ಅಧ್ಯಕ್ಷರು.—ಪ್ರಿವಿಲೇಜ್ ಇಷ್ಯೂ ಈ ಬಗ್ಗೆ ಏನು ಇದೆ ಅದರ ಬಗ್ಗೆ ಎರಡು ವಿಚಾರ ಹೇಳಲು ಅಂತ ನಾನು ತಮಗೆ ಅವಕಾಶ ಕೊಟ್ಟೆ. ಆದರೆ ಅದರ ವಿವರಗಳ ಬಗ್ಗೆ ಹೇಳುವುದಕ್ಕೆ ಹೋಗಬೇಡಿ. The Hon'ble Minister for Revenue will now reply to the Debate regarding his Demands for Grants.

Nomination of opposition party members on to the L. Ts and L. G. Committees

SRI S. R. BOMMAI (Hubli).—Sir, I have one more point. There was a clear solemn assurance by the Revenue Minister in this House that in the constitution of the Land Tribunals he will nominate one

Opposition Member in each Tribunal as per my suggestion. Hon. member Sri J. H. Patel referred to this point during his speech. In about 40 to 50 Land Tribunals, Opposition members have not been included. I had adiscussion with the Revenue Minister in this connection. I had also raised the issue of privilege and the Minister had assured that he will reconstitute the Land Tribunals.

Further, he is now constituting Land Grant Committees. Of course, orally he has asked me to give list of the Opposition Members to be included on these committees. I told him that unless there is a positive assurance from the Hon'ble Minister to include one Opposition member in each Land Grant Committee I am not prepared to give the list. I would like to have a solemn assurance from him that he will include one Opposition member on each Land Grant Committee and also in the Land Tribunals. He should not only give an assurance but he should also implement it within a week or two. Otherwise, we will have to take recourse to force him to implement it.

BUDGET ESTIMATES FOR 1979-80
Demands for Grants.

Demand Nos. 21,48 to 52 and 59 (Debate Continued)

ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಕಂದಾಯ ಬೇಡಿಕೆ ಮೇಲೆ ಬಹಳ ಜನ ಮಾನ್ಯ ಸದಸ್ಯರುಗಳು ಭಾಗವಹಿಸಿದ್ದಾರೆ. ಇದರಲ್ಲಿ ನಾನು ನಿರೀಕ್ಷಣೆ ಮಾಡಿದ್ದು, ಬಹಳ ಟೀಕೆಗಳು ಕಠಿಣವಾಗಿರುತ್ತವೆ ಅಥವಾ ತೀಕ್ಷ್ಣವಾಗಿರುತ್ತವೆ ಎಂದು. ಆದರೆ ಮಾನ್ಯ ಸದಸ್ಯರು ಗಳು ಮಾಡಿದಂಥಾ ಭಾಷಣಗಳಲ್ಲಿ ಯಾವುದೂ ಕೂಡ ಹಾಗಿರಲಿಲ್ಲಾ. ಅವರು ತಮ್ಮ ಭಾಷಣವನ್ನು ಸರ್ವೇಸಾಮಾನ್ಯವಾಗಿ ಒಂದು ಸಲಹಾ ರೂಪದಲ್ಲಿ ಮಾತನಾಡಬಹುದಾಗಿತ್ತು. ಆ ರೀತಿ ಮಾತನಾಡಿದ್ದರೆ ಅದರಿಂದ ಏನಾಗುತ್ತದೆ ಎಂದರೆ ಈ ಒಂದು ವರ್ಷದಿಂದ ರೆವಿನ್ಯೂ ಇಲಾಖೆಯ ಅಧಿಕಾರಿಗಳು ತಮ್ಮ ಕಾರ್ಯವನ್ನು ಏನು ನಿರ್ವಹಣೆ ಮಾಡುತ್ತಿದ್ದಾರೆ ಅದು ಸಮರ್ಪಕವಾಗಿದೆ ಎಂದು ನನಗೆ ಕಾಣಿ ಸುತ್ತಾ ಇತ್ತು.

ಇಲ್ಲಿ ಅಲ್ಲಿ ಮಾನ್ಯ ಸದಸ್ಯರುಗಳು ಹಲವಾರು ಟೀಕೆಗಳನ್ನು ಮಾಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಸಬ್ ಡಿವಿಷನ್‌ಗಳ ಮಟ್ಟದಲ್ಲಿ ಕಾರ್ಯಾಚರಣೆ ಸರಿಯಾಗಿ ನಡೆಯುತ್ತಿಲ್ಲವೆಂದು ಅವರುಗಳು ಹೇಳಿದ್ದಾರೆ. ಅಲ್ಲದೆ ಅವರು ಜನಗಳನ್ನು ಸರಿಯಾಗಿ ನೋಡುತ್ತಿಲ್ಲ, ಅವರ ಕುಂದುಕೊರತೆ ಗಳನ್ನು ವಿಚಾರಣೆ ಮಾಡಿ ಸರಿಯಾಗಿರತಕ್ಕ ಪರಿಹಾರವನ್ನು ಕೊಡುವುದಿಲ್ಲ ಎಂದು ಮುಂತಾದ ದೂರು ಗಳನ್ನು ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದಿದ್ದಾರೆ. ಇಂಥ ಟೀಕೆಗಳನ್ನು ಬಿಟ್ಟರೆ, ಹೆಚ್ಚಿನ ಟೀಕೆಗಳು ಏನೂ ಮಾನ್ಯ ಸದಸ್ಯರುಗಳಿಂದ ಬಂದಂತೆ ಕಾಣಲಿಲ್ಲ. ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ಕಾನೂನಿನ ತಿಳಿವಳಿಕೆ ಇಲ್ಲ, ಸರಿಯಾಗಿ ಸರ್ಕಾರದ ಹುಕುಂ ಗಳನ್ನು ಅವರು ಓದುವುದಿಲ್ಲ, ಹಾಗೂ ಹೇಗೆ ಅವರು ರಾಜ್ಯಭಾರ ಮಾಡಬೇಕು ಎನ್ನುವುದರ ಬಗ್ಗೆ ಇವರಿಗೆ ಸಾಕಷ್ಟು ಪರಿಶ್ರಮ ಇಲ್ಲ ಎಂದು ಟೀಕೆ ಮಾಡಿದ್ದಾರೆ. ಅದಕ್ಕಾಗಿಯೇ ನಾನು ಕಂದಾಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಒಂದು ವರ್ಷದಿಂದ ಇಲ್ಲಿಯವರೆಗೆ ಪ್ರತಿಯೊಬ್ಬ ಅಧಿಕಾರಿಯೂ ಅವರು ಜಿಲ್ಲಾಧಿಕಾರಿಯಾಗಿರಲಿ, ಸಬ್ ಡಿವಿಷನ್ ಅಧಿಕಾರಿಯಾಗಿರಲಿ, ಅಥವಾ ತಹಸೀಲ್ದಾರ್ ಆಗಿರಲೀ ಅಥವಾ ಕೆಳಮಟ್ಟದ ಅಧಿಕಾರಿಯಾಗಿರಲೀ ರಾಜ್ಯದ ವ್ಯವಹಾರಗಳಲ್ಲಿ ಸಾಕಷ್ಟು ಪರಿಶ್ರಮ ಇರಬೇಕು ಎಂದು ಒತ್ತಾಯವಾಗಿ ಕಾರ್ಯಕ್ರಮಗಳನ್ನು ನಾನು ಹಾಕಿಕೊಂಡಿದ್ದೇನೆ. ಜಿಲ್ಲಾ ಹಂತದಲ್ಲಿ ಟ್ರೈನಿಂಗ್